**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ಸಂಖ್ಯೆ : 571/2024**

**ಚಾ.ಸಾಃ 6, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ನಾಗರಾಜ ಗೌಡ |
| ತಂದೆಯ ಹೆಸರು | ಕನ್ಯಾ ಗೌಡ |
| ವಯಸ್ಸು | 28 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಾಸ್ತವ್ಯ | ಹಳಗೇರಿ, ಮುಗ್ವಾ |

**ಸಾಕ್ಷಿಯನ್ನು ದಿನಾಂಕಃ 27-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿದ್ದೇನೆ.

ನಾನು ಕೆಎ-47/0089 ಪಲ್ಸರ್ ಬೈಕಿನ ಮಾಲಿಕ. ದಿನಾಂಕ 18-01-2024 ರಂದು ನಾನು ಮತ್ತು ನನ್ನ ಸ್ನೇಹಿತ ಮೃತ ಗಣೇಶ ಹೊನ್ನಾವರದಿಂದ ಗೇರುಸೊಪ್ಪಾಕ್ಕೆ ಹೋಗುತ್ತಿದ್ದೆವು. ಮಧ್ಯಾಹ್ನ 03-45 ರ ಸಮಯಕ್ಕೆ ಹಂಗಾರಗುಂಡಿ ಹತ್ತಿರ ಹೋಗುತ್ತಿದ್ದಾಗ ಎದುರಿನಿಂದ ಒಂದು ಬುಲೆರೊ ವಾಹನ ಸ್ಪೀಡಾಗಿ ಬರುತ್ತಿತ್ತು. ಹೀಗೆ ಬರುತ್ತಿದ್ದ ವಾಹನವು ಬಲಭಾಗಕ್ಕೆ ತಿರುಗಿ ನಮಗೆ ಎದುರಿನಿಂದ ಬಂದು ಡಿಕ್ಕಿಪಡಿಸಿತು. ತಕ್ಷಣ ಇಬ್ಬರೂ ರಸ್ತೆಯ ಪಕ್ಕದ ಚರಂಡಿಗೆ ಬಿದ್ದೆವು. ಡಿಕ್ಕಿಪಡಿಸಿದ ನಂತರ ಬೊಲೆರೋ ಸಹ ಗಟಾರದ ಹತ್ತಿರ ಬಂದು ನಿಂತಿರುತ್ತದೆ. ನಾನು ನೋಡಿದಾಗ ಸದರಿ ವಾಹನದಿಂದ ಇಬ್ಬರು ಓಡಿ ಹೋದರು. ನಂತರ ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ತದ ನಂತರದಲ್ಲಿ ನನ್ನ ಹಿಂದೆ ಕುಳಿತಿದ್ದ ಗಣೇಶ ಸ್ಥಳದಲ್ಲಿಯೇ ಮೃತಪಟ್ಟಿರುವುದಾಗಿ ಗೊತ್ತಾಗಿರುತ್ತದೆ. ಸದರಿ ಬೊಲೆರೊ ವಾಹನದ ಚಾಲಕನನ್ನು ನೋಡಿದ್ದೇನೆ, ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯು ನಮ್ಮ ಎದುರಿನಿಂದ ಬರುತ್ತಿರುವಾಗ ರಸ್ತೆ ಮಧ್ಯದ ಬಿಳಿ ಗೆರೆಯನ್ನು ದಾಟಿ ಬಲಕ್ಕೆ ಬಂದು ನಮಗೆ ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆ. ಅಪಘಾತದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ.ಆರ್. ನಾಯ್ಕರಿಂದಃ**

ನಾನು ಹೊನ್ನಾವರದಿಂದ ಗೇರುಸೊಪ್ಪಾಕ್ಕೆ ಖಾಯಂ ಓಡಾಡುತ್ತೇನೆ. ಅಪಘಾತ ಆಗುವ ಸುಮಾರು 50 ಅಡಿ ಮುಂದೆ ರಸ್ತೆಯ ಬಲಬದಿಗೆ ಒಂದು ಕಲ್ಲಂಗಡಿ ಹಣ್ಣಿನ ಅಂಗಡಿ ಇದೆ. ಅಪಘಾತ ಆದ ಸ್ಥಳದಲ್ಲಿ 100 ಮೀಟರ್ ರಸ್ತೆ ನೇರವಾಗಿದೆ. ನಮ್ಮ ಎದುರಿನಲ್ಲಿ ಯಾವುದೇ ವಾಹನಗಳು ಹೋಗುತ್ತಿರಲಿಲ್ಲ. ರಸ್ತೆ ಎಷ್ಟು ಅಡಿ ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಅಪಘಾತವು ರಸ್ತೆಯ ಎಡ ಅಂಚಿನಿಂದ ಎಷ್ಟು ಅಡಿ ದೂರದಲ್ಲಿ ಅಪಘಾತ ಆಗಿದೆ ಎಂಬುದನ್ನು ನಾನು ಪೋಲೀಸರಿಗೆ ಹೇಳಿಲ್ಲ.

ಆದರೆ ಅಪಘಾತವು ರಸ್ತೆಯ ಮಧ್ಯದ ಬಿಳಿ ಪಟ್ಟಿಯಿಂದ 3-4 ಅಡಿ ಎಡಭಾಗಕ್ಕೆ ಆಗಿರುತ್ತದೆ ಅಂತ ಹೇಳಿದ್ದೇನೆ. ನಾನು ಬೈಕನ್ನು ರಸ್ತೆಯ ಎಡ ಅಂಚಿನಲ್ಲಿರುವ ಬಿಳಿಪಟ್ಟಿಯಿಂದ ಸುಮಾರು 3 ಅಡಿ ದೂರದಲ್ಲಿ ಹೋಗುತ್ತಿದ್ದೆ. ಬೊಲೆರೊ ವಾಹನ ಎದುರಿನಲ್ಲಿ ಬರುತ್ತಿದ್ದುದನ್ನು ಸುಮಾರು 100 ಅಡಿಗೂ ಹೆಚ್ಚು ಅಂತರದಿಂದ ನೋಡಿರುತ್ತೇನೆ. ಬೊಲೆರೊ ವಾಹನ ಮೊದಲು ಬರುತ್ತಿದ್ದಾಗ ತನ್ನ ಭಾಗ ಎಡ ರಸ್ತೆಯಲ್ಲಿಯೇ ಬರುತ್ತಿದ್ದರು. ಬರಬರುತ್ತ ನನ್ನಿಂದ ಸುಮಾರು 20 ಅಡಿ ದೂರದಲ್ಲಿದ್ದಾಗ ಬಲಕ್ಕೆ ತೆಗೆದುಕೊಂಡಿರುತ್ತಾರೆ. ನಾನು ಹೋಗುತ್ತಿದ್ದಾಗ ಎದುರಿನಿಂದ ಬಂದವರು ನನಗೆ ಡಿಕ್ಕಿ ಪಡಿಸಿರುತ್ತಾರೆ. ಏಕಾ ಏಕಿ ನನಗೆ ಬಂದು ಡಿಕ್ಕಿಪಡಿಸಿದ್ದರಿಂದ ನಾನು ಬೈಕನ್ನು ಯಾವುದೇ ಕಡೆಗೆ ತೆಗೆದುಕೊಳ್ಳಲಾಗಲಿಲ್ಲ. ನಾವು ಬೈಕಿನಲ್ಲಿ ಹೋಗುತ್ತಿದ್ದಾಗ ಎದುರಿನಲ್ಲಿ ಕಲ್ಲಂಗಡಿ ಹಣ್ಣಿನ ಅಂಗಡಿ ಇದ್ದರಿಂದ ಹಣ್ಣು ತಿನ್ನುವ ಕಾರಣಕ್ಕೆ ಎದುರಿನಲ್ಲಿ ಬೊಲೆರೊ ವಾಹನ ಬರುತ್ತಿದ್ದುದನ್ನು ನೋಡಿದ್ದರೂ ಏಕಾ ಏಕಿ ಬಲಕ್ಕೆ ತಿರುಗಿಸಿದ್ದರಿಂದ ಅಪಘಾತ ಆಗುವುದನ್ನು ತಪ್ಪಿಸಲು ಆರೋಪಿಯು ತನ್ನ ವಾಹನವನ್ನು ಸಂಪೂರ್ಣವಾಗಿ ಬಲಕ್ಕೆ ತೆಗೆದುಕೊಂಡು ಅಪಘಾತ ತಪ್ಪಿಸಲು ಪ್ರಯತ್ನಿಸಿದರೂ ನಾನೇ ಬೊಲೆರೊ ವಾಹನಕ್ಕೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನಮ್ಮ ಸಂಬಂಧಿಕರು ಮೃತಪಟ್ಟಿದ್ದು ಅವರನ್ನು ನೋಡಲು ಹೋಗುತ್ತಿದ್ದೆವು, ಆದರೆ ಈ ವಿಚಾರವನ್ನು ನಾನು ಪೋಲೀಸರಿಗೆ ಹೇಳಲಿಲ್ಲ. ಮೃತಪಟ್ಟ ಸಂಬಂಧಿಕರ ಹೆಸರು ನನಗೆ ಗೊತ್ತಿಲ್ಲ. ನಾನು ಆ ದಿನ ಯಾವುದೇ ಸಾವಿಗೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ಅಪಘಾತ ಆಗಿದ್ದರೂ ಪರಿಹಾರಕ್ಕೋಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**